ದಿನಾಂಕಃ **13-09-2021.**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಯು ವಕೀಲರಿಂದಃ

ನಿಪಿ- 23 ರಲ್ಲಿ ತೋರಿಸಿರುವ ಚಕ್ಕುಬಂದಿಯಲ್ಲಿ ಉತ್ತರಕ್ಕೆ ಃ ಹೆಚ್ ಬಿ ಮೂಡ್ಲಪ್ಪ ಮತ್ತು ದಕ್ಷಿಣಕ್ಕೆ ಃ ಅಟ್ಟಪ್ಪ ನವರ ಜಮೀನು ಇದೆ , ಅವರು ನನ್ನ ತಂದೆಯ ಸಹೋದರರು ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಸದರಿ ಪತ್ರವನ್ನು ಸೃಷ್ಟಿಮಾಡಲಾಗಿದೆ ಎನ್ನುತ್ತಾರೆ. ಅಟ್ಟಪ್ಪನವರು ಅದೇ ದಿನ 13 ಗುಂಟೆ ಜಮೀನನ್ನು ಖರೀದಿಸಿದ್ದಾರೆ ಎಂದರೆ ಸುಳ್ಳು. ನಿಪಿ- 22 ರಲ್ಲಿ ಉತ್ತರಕ್ಕೆಃ ಹನುಮಂತಪ್ಪನವರ ಜಮೀನು ಇದೆ , ಹನುಮಂತಪ್ಪ ಎಂದರೆ ನನ್ನ ತಂದೆಯ ಸಹೋದರ ಮತ್ತು ವಾದಿ 1 , 3 ರಿಂದ 7 ರವರ ತಂದೆ ಎಂದರೆ ಸಾಕ್ಷಿ ಸುಳ್ಳು ಪತ್ರವನ್ನು ಸೃಷ್ಟಿ ಮಾಡಿದ್ದಾರೆ ಎನ್ನುತ್ತಾರೆ .

ದಿಃ 16-07-1969 ರಲ್ಲಿ ಒಂದೇ ದಿನ 888, 889, 890 ಎಂದು ಕ್ರಯ ಪತ್ರ ನೋಂದಣಿಯಾಗಿವೆ ಎಂದರೆ ಸುಳ್ಳು. ಸಾಕ್ಷಿ ಸುಳ್ಳು ಪತ್ರವನ್ನು ಸೃಷ್ಟಿಸಿದ್ದಾರೆ ಎನ್ನುತ್ತಾರೆ . ಸಾಕ್ಷಿಗೆ ನಿಪಿ-4 ನ್ನು ತೋರಿಸಲಾಗಿ ಅದರಲ್ಲಿ ಎಂ.ಆರ್.ನಂ.7/69-70 ರಂತೆ ಖಾತೆ ಬದಲಾವಣೆಯಾಗಿದೆ ಎಂದರೆ ಸುಳ್ಳು. ಮೂಡ್ಲಪ್ಪ ಬಿನ್ ತಿಮ್ಮಣ್ಣ ನನ್ನ ತಂದೆ ಎಂದರೆ ಸರಿ. ಆದರೆ ಸುಳ್ಳು ದಾಖಲೆ ಸೃಷ್ಟಿಸಲಾಗಿದೆ ಎನ್ನುತ್ತಾರೆ. ಹನುಮಂತಪ್ಪನವರು ಖರೀದಿಸಿದ 13 ಗುಂಟೆಗೆ ನಿಪಿ- 5 ರಂತೆ ಎಂ.ಆರ್.ನಂ.9/69-70 ರಂತೆ ಖಾತೆ ಬದಲಾವಣೆಯಾಗಿದೆ ಎಂದರೆ ಸುಳ್ಳು . ಅಟ್ಟಪ್ಪನವರು ಖರೀದಿಸಿದ 13 ಗುಂಟೆಗೆ ನಿಪಿ-6 ರಂತೆ ಎಂ.ಆರ್.ನಂ.8/69-70 ರಂತೆ ಖಾತೆ ಬದಲಾವಣೆಯಾಗಿದೆ ಎಂದರೆ ಸುಳ್ಳು . ಖರೀದಿಸಿದ ದಿನಾಂಕದಿಂದ ಖರೀದಿ ಪತ್ರದಂತೆ ನನ್ನ ತಂದೆ , ಹನುಮಂತಪ್ಪ ಮತ್ತು ಅಟ್ಟಪ್ಪನವರು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸಾಕ್ಷಿ ನಮ್ಮ ಕ್ರಯಪತ್ರದಂತೆ ನಾವು ಸ್ವಾಧೀನದಲ್ಲಿದ್ದೇವೆ ಬೇರೆ ಯಾರು ಇಲ್ಲ ಎನ್ನುತ್ತಾರೆ . ಹೆಚ್.ಜಿ. ಮೂಡ್ಲಪ್ಪ ಖರೀದಿಸಿದ ಸ್ವತ್ತಿನಲ್ಲಿ ಪ್ರತಿವಾದಿ 1 ರಿಂದ 5 ರವರು ಸ್ವಾಧೀನಾ ನುಭವದಲ್ಲಿ

ಇದ್ದಾರೆ ಎಂದರೆ ಹನುಮಂತಪ್ಪನವರು ಮತ್ತು ಅಟ್ಟಪ್ಪನವರು ಖರೀದಿಸಿದ ಸ್ವತ್ತಿನಲ್ಲಿ ವಾದಿಗಳು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸುಳ್ಳು. ಹನುಮಂತಪ್ಪನವರು ಮತ್ತು ಅಟ್ಟಪ್ಪನವರಿಗೆ ಪ್ರಾಪಂಚಿಕ ಜ್ಞಾನ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮೊದಲಿನಿಂದಲೂ ಸಹ ಪ್ರಾಪಂಚಿಕ ಜ್ಞಾನಉಳ್ಳವರಾಗಿ ವಿದ್ಯಾವಂತರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಎಂ.ಆರ್.ನಂ. , ಪಹಣಿಗಳು ಬಂದಿಲ್ಲ ಎಂದು ಹೇಳಿ ವಾದಿಗಳು ನಮಗೆ 2014-15 ರಲ್ಲಿ ಅದನ್ನು ಸರಿಪಡಿಸಿಕೊಡುವಂತೆ ಕೇಳಿದರು ಎಂದರೆ ಸರಿಯಲ್ಲ. ಆಗ ನಾನು ಮಾಡಿಸಿಕೊಡುತ್ತೇನೆಂದು ಹೇಳುತ್ತಾ ಬರುತ್ತಿದ್ದೆ ಆನಂತರ ಅವರ ಹಕ್ಕನ್ನು ಅಲ್ಲಗಳೆದೆನು ಎಂದರೆ ಸರಿಯಲ್ಲ.

ಮೂಲ ಸ.ನಂ. 65/2 ರ ಪಕ್ಕದಲ್ಲಿ ಸ.ನಂ. 65/1 ನಮಗೆ ಮತ್ತು ಅಟ್ಟಪ್ಪ ಮತ್ತು ಹನಮಂತಪ್ಪನವರಿಗೆ ಸೇರಿದ ಜಮೀನು ಇದೆ ಎಂದರೆ ಸುಳ್ಳು. ಸ.ನಂ. 65/1 ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಆ ಸ.ನಂ.ಗಳ ಪಶ್ಚಿಮಕ್ಕೆ ಇರುವ ಸ.ನಂ.68 ನಮಗೆ ಸೇರಿದ ಜಮೀನು. ಸ.ನಂ. 68 ರಲ್ಲಿ ಸುಮಾರು 24 ಎಕರೆ ಜಮೀನು ಇರಬಹುದು ಅದರಲ್ಲಿ ನಮ್ಮ ಭಾಗಕ್ಕೆ 7 ಎಕರೆ 32 ಗುಂಟೆ ನನ್ನ ತಂದೆಯ ಭಾಗಕ್ಕೆ ಬಂದಿದೆ ಎನ್ನುತ್ತಾರೆ. ಆ ಸ.ನಂ. ನಲ್ಲಿ ನನ್ನ ತಂದೆ ಸಹೋದರರಿಗೆ ಜಮೀನು ಬಂದಿದೆ ಎಂದರೆ ಸರಿ. ಸ.ನಂ.65/2 ರಲ್ಲಿ ಗಾಯತ್ರಿ ಜಲಾಶಯದಿಂದ ಕಾಲುವೆ ಹಾದುಹೋಗುತ್ತದೆ ಎಂದರೆ ಸರಿ. ಅದರ ಪಶ್ಚಿಮಕ್ಕೆ ಕಾಲುವೆ ಮೇಲೆ ಸರ್ಕಾರದವರು ರಸ್ತೆ ಮಾಡಿದ್ದಾರೆ ಎಂದರೆ ಸರಿ. ಸ.ನಂ.65/2 ರ ದಕ್ಷಿಣಕ್ಕೆ ಕೆ.ಸುಬ್ಬರಾಯಪ್ಪನವರ ಜಮೀನು ಇದೆ ಎಂದರೆ ಸುಳ್ಳು . ಗೋವಿಂದಪ್ಪನವರ ಜಮೀನು ಇದೆ ಎನ್ನುತ್ತಾರೆ. ಗೋವಿಂದಪ್ಪನವರು ಯಾರಿಂದ ಆ ಜಮೀನನ್ನು ಖರೀದಿಸಿದರು ಎಂದರೆ ನನಗೆ ಗೊತ್ತಿಲ್ಲ. ಆ ಜಮೀನು ಮೂಲತಃ ಸುಬ್ಬರಾಯಪ್ಪನವರದ್ದು ಎಂದರೆ ನನಗೆ ಗೊತ್ತಿಲ್ಲ. ಕಾಲುವೆಯು ಪಶ್ಚಿಮಕ್ಕೆ ಸುಬ್ಬರಾಯಪ್ಪನ ಜಮೀನಿಗೆ ಹೊಂದಿಕೊಂಡಂತೆ ನನ್ನ ತಂದೆ ಮತ್ತು ಸಹೋದರರು ಖರೀದಿಸಿದ ಜಮೀನು ಬರುತ್ತದೆ ಎಂದರೆ ಸುಳ್ಳು . ಸ.ನಂ. 68 ರಲ್ಲಿನ

ಜಮೀನುಗಳಿಗೆ ಹೋಗುವ ಸಲುವಾಗಿ ಮತ್ತು ಮನೆ ಕಟ್ಟಿಕೊಳ್ಳಲು ಸ.ನಂ. 65/2 ರಲ್ಲಿ 14 ಗುಂಟೆ ಜಮೀನನ್ನು ನನ್ನ ತಂದೆ ಮತ್ತು ಅವರ ಸಹೋದರರು ಖರೀದಿಸಿದ್ದರು ಎಂದರೆ ಸುಳ್ಳು .ಆ 14 ಗುಂಟೆ ಜಮೀನಿನಲ್ಲಿ ನಾನು ಮತ್ತು ನನ್ನ ತಮ್ಮ ಮನೆಕಟ್ಟಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಸ.ನಂ. 65/2 ರಲ್ಲಿ ನಾವು ಖರೀದಿಸಿದ ಜಮೀನಿನಲ್ಲಿ ಮನೆ ಕಟ್ಟಿದ್ದೇವೆ ಎನ್ನುತ್ತಾರೆ. ಅಂಗಡಿ ತಿಮ್ಮಯ್ಯನವರಿಂದ ಜಮೀನು ಖರೀದಿಸುವಾಗ ಸ.ನಂ.65/1 ಎ ನಲ್ಲಿ 4 ಎಕರೆ ಜಮೀನು ನನ್ನ ತಂದೆ ಮತ್ತು ಅವರ ಸಹೋದರರಿಗೆ ಬಂದಿತ್ತು ಎಂದರೆ ಗೊತ್ತಿಲ್ಲ . ನನ್ನ ತಂದೆ ಮತ್ತು ಅವರ ಸಹೋದರರು ಸ.ನಂ. 65/1 ಎ ರಲ್ಲಿ 1 ಎಕರೆ ಜಮೀನನ್ನು ಅಂಗಡಿ ತಿಮ್ಮಯ್ಯನವರಿಗೆ ಮಾರಾಟ ಮಾಡಿದರು ಎಂದರೆ ಸುಳ್ಳು . ನನ್ನ ತಂದೆಗೆ ಬಂದಂತಹ ಭಾಗವನ್ನು 38 ಗುಂಟೆ ಜಮೀನನ್ನು ಅಟ್ಟಪ್ಪನಿಗೆ ಕೊಟ್ಟು ಬೇರೆ ಸ.ನಂ. ನಲ್ಲಿನ ಜಮೀನನ್ನು ಪಡೆದುಕೊಂಡರು ಎಂದರೆ ನನಗೆ ಗೊತ್ತಿಲ್ಲ. ಡಿ. ತಿಮ್ಮಯ್ಯನವರು ಸಣ್ಣಯ್ಯನವರಿಗೆ ಸ.ನಂ. 65/1 ಎ ನಲ್ಲಿ 1 ಎಕರೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಮಾಡಿರಬಹುದು ನನಗೆ ಗೊತ್ತಿಲ್ಲ ಎನ್ನುತ್ತಾರೆ .

ಎಸ್.ಕೆ. ಸಿದ್ದಣ್ಣ ನವರು ಹಕ್ಕು ಮತ್ತು ಸ್ವಾಧೀನದಲ್ಲಿದ್ದರು ಎಂದು ತೋರಿಸಲು ನೋಂದಣಿ ಕ್ರಯಪತ್ರ ಇದೆಯಾ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಪಹಣಿ ಇತ್ತು ನನ್ನ ತಂದೆ ಕ್ರಯ ಮಾಡಿಸಿಕೊಂಡಿದ್ದಾರೆ ಎನ್ನುತ್ತಾರೆ. ಸ.ನಂ. 65/2 ರಲ್ಲಿ ಎಸ್.ಕೆ. ಸಿದ್ದಣ್ಣ ನ ವರಿಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇರಲಿಲ್ಲ ಎಂದರೆ ಸಾಕ್ಷಿ ಪಹಣಿ ಇತ್ತು ಎನ್ನುತ್ತಾರೆ. ಪಹಣಿ , ಇತರೆ ದಾಖಲೆಗಳು ಮತ್ತು ಕಂದಾಯ ದಾಖಲೆಗಳನ್ನು ನಾನು ಮತ್ತು ಎಸ್.ಕೆ. ಸಿದ್ದಣ್ಣನವರು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಪತ್ರಗಳನ್ನು ನಾನು ಮತ್ತು ಎಸ್.ಕೆ. ಸಿದ್ದಣ್ಣನವರು ಸೃಷ್ಟಿ ಮಾಡಿಸಿಕೊಂಡ ದಾಖಲೆಗಳು ಎಂದರೆ ಸರಿಯಲ್ಲ. ಸ.ನಂ. 65/2 ರಲ್ಲಿ ಡಿ.ತಿಮ್ಮಯ್ಯ ಮತ್ತು ಅವರ ವಾರಸುದಾರರರಿಗೆ ಮಾತ್ರ ಹಕ್ಕು ಇದೆ ನನಗೆ ಮತ್ತು ಎಸ್ ಕೆ ಸಿದ್ದಣ್ಣನವರಿಗೆ ಯಾವುದೇ ಹಕ್ಕು

ಇಲ್ಲ ಎಂದರೆ ಸುಳ್ಳು . ನನಗೆ 3 ಜನ ಸಹೋದರಿಯರು. ಅವರ ಹೆಸರು ಭಾಗ್ಯಮ್ಮ, ಪಾರ್ವತಮ್ಮ ಮತ್ತು ರತ್ನಮ್ಮ. ಭಾಗ್ಯಮ್ಮನವರನ್ನು ಶಿರಾದ ಪಾಂಡುರಂಗಪ್ಪನವರಿಗೆ ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ಸರಿ. ಪಾಂಡುರಂಗಪ್ಪನವರು ಮತ್ತು ಅವರ ತಂದೆ ದುರ್ಗಣ್ಣ ನವರು ಮರಣಹೊಂದಿದ್ದಾರೆ ಎಂದರೆ ಸರಿ. ನಿಪಿ-3 , 22, 23 ರಂತೆ ದುರ್ಗಣ್ಣನವರೆ ಜಮೀನುಗಳನ್ನು ಕೊಡಿಸಿ , ಅವರೇ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಎಸ್.ಕೆ. ಸಿದ್ದಣ್ಣ ಮತ್ತು ಡಿ.ತಿಮ್ಮಣ್ಣನವರು ಅಣ್ಣ-ತಮ್ಮಂದಿರು ಎಂದು ತೋರಿಸಲು ದಾಖಲಾತಿಗಳು ಇವೆಯೇ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಅವರು ಬಾಯಿ ಮಾತಿನ ಮೂಲಕ ಭಾಗ ಮಾಡಿಕೊಂಡರು , ಅವರಿಗೆ ಎಷ್ಟು ಸ್ವತ್ತುಗಳು ಇದ್ದವು ಎಂದು ನನಗೆ ಗೊತ್ತಿಲ್ಲ . ಸಾಕ್ಷಿ ನಾವು ಎಸ್.ಕೆ. ಸಿದ್ದಣ್ಣನವರಿಂದ ಖರೀದಿಸಿದ್ದೆವು ಎನ್ನುತ್ತಾರೆ. ಈ ದಾವೆಯನ್ನು ಸಲ್ಲಿಸಿದ ನಂತರ ಮಾಲೀಕತ್ವ ದ ಘೋಷಣೆಗಾಗಿ ಯಾವುದೇ ದಾವೆಯನ್ನು ಹೂಡಿಲ್ಲ , ಸಾಕ್ಷಿ ನಮ್ಮ ಜಮೀನಿನಲ್ಲಿ ನಾವು ಇದ್ದೇವೆ ಎನ್ನುತ್ತಾರೆ. ಸ.ನಂ.65/2 ರಲ್ಲಿ 14 ಗುಂಟೆ ಜಮೀನನ್ನು ಬಿಟ್ಟು ಉಳಿದ ಜಮೀನಿಗೆ ನಮಗೆ ಮತ್ತು ಎಸ್.ಕೆ. ಸಿದ್ದಣ್ಣನವರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 5 ಎಕರೆ 30 ಗುಂಟೆ ಜಮೀನಿನಲ್ಲಿ ನಾವೇ ಸ್ವಾಧೀನದಲ್ಲಿದ್ದೇವೆ ಎನ್ನುತ್ತಾರೆ. ವಾದಿಗಳಿಗೆ ಮೋಸ ಮಾಡಿ ಅವರ ಖರೀದಿಸಿದ 13 ಗುಂಟೆ 13 ಗುಂಟೆ ಜಮೀನುಗಳನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ , ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ , ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ನಾನು ಕಾನಾನು ಬದ್ದವಾಗಿ 5 ಎಕರೆ 30 ಗುಂಟೆ ಜಮೀನಿನಲ್ಲಿ ಇದ್ದೇನೆ ಎನ್ನುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆರೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.